ವಿಷಯ: ಜಿಲ್ಲಾ ಕೇಂದ್ರಗಳಲ್ಲಿ ಸ್ವಾತಂತ್ರ್ಯ ಸ್ಮಾರಕ ನಿರ್ಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1641 (2006)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ್ವಿಟ್ ಇಂಡಿಯಾ ಮೂವ್‌ಮೆಂಟಿನ 50ನೇ ವರ್ಷದ ಆಚರಣೆ ಅಂಗವಾಗಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸ್ವಾತಂತ್ರ್ಯ ಸಂಗ್ರಾಮದ ಸ್ಮರಣಾರ್ಥವಾಗಿ ಒಂದೊಂದು ಸ್ಮಾರಕವನ್ನು ನಿರ್ಮಿಸುವ ಬಗ್ಗೆ ಸಂಪುಟ ಸಭೆ ನಿರ್ಣಯವನ್ನು ಅಂಗೀಕರಿಸಿದೆಯೆ?

ಆ) ಅದನ್ನು ಕಾರ್ಯರೂಪಕ್ಕೆ ತರಲು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಕ್ತ ಸ್ಥಳಗಳನ್ನು ಸೂಚಿಸಲು ಆದೇಶ ನೀಡಲಾಗಿದೆಯೇ?

ಇ) ಈ ಬಗ್ಗೆ ಪ್ರತಿಯೊಂದು ಜಿಲ್ಲೆಯಿಂದಲೂ ಹಿರಿಯ ಸ್ವಾತಂತ್ರ್ಯ ಸೇನಾನಿಗಳನ್ನು ಕರೆಸಿ, ಅವರ ಅಭಿಪ್ರಾಯಗಳನ್ನು ಸರ್ಕಾರ ಸಂಗ್ರಹಿಸಿದೆಯೆ?

ಈ) ಕಾರ್ಯಕ್ರಮದ ಅನುಷ್ಠಾನಕ್ಕೆ ಸರ್ಕಾರ ಏನು ಯೋಜನೆ (ಏರ್ಪಾಡು) ಹಾಕಿಕೊಂಡಿದೆ?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಹೌದು.

ಆ) ಹೌದು.

ಇ) ಬೆಂಗಳೂರು, ಧಾರವಾಡ, ಗುಲ್ಬರ್ಗಾ, ಚಿಕ್ಕಮಗಳೂರು, ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಅಭಿಪ್ರಾಯ ನೀಡಿರುತ್ತಾರೆ.

ಈ) ಹಣಕಾಸಿನ ಲಭ್ಯತೆಯನ್ನವಲಂಬಿಸಿ ಹಂತ ಹಂತವಾಗಿ ವೀರಸೌಧಗಳನ್ನು ಕಟ್ಟಲು ನಿರ್ಧರಿಸಲಾಗಿದೆ.

ವಿಷಯ: ದಿನಗೂಲಿ ನೌಕರರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1642 (2342)

ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ದಿನಗೂಲಿ ನೌಕರರ ಸಂಖ್ಯೆ ಎಷ್ಟಿವೆ. (ಜಿಲ್ಲಾವಾರು ಮತ್ತು ಇಲಾಖೆವಾರು ವರದಿ ನೀಡುವುದು.

ಆ) ದಿನಗೂಲಿ ನೌಕರರನ್ನು ಖಾಯಂಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಇ) ದಿನಗೂಲಿ ನೌಕರರ ಸಂಬಳ ಪ್ರತಿ ತಿಂಗಳು ನೀಡದೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅದನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು) :-

ಅ) ಲಭ್ಯವಿರುವ ಮಾಹಿತಿಯ ಪ್ರಕಾರ ಸುಮಾರು 59,820 ದಿನಗೂಲಿ ನೌಕರರು ಇದ್ದಾರೆ.

ಜಲ್ಲಾವಾರು ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ. ಇಲಾಖಾವಾರು ವಿವರಣೆ ಪಟ್ಟಿಯನ್ನು ಲಗತ್ತಿಸಿದೆ.

ಆ) ಸರ್ವೋನ್ನತ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8307-11:83ರಲ್ಲಿ ದಿನಾಂಕ 23-2-90 ರಂದು ನೀಡಿದ ಅಂತಿಮ ಆದೇಶದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರಂದು ಮತ್ತು ಅದಕ್ಕಿಂತ ಹಿಂದೆ ನೇಮಕಗೊಂಡ ಸಾಂಧರ್ಬಿಕ: ದಿನಗೂಲಿ ನೌಕರರನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಬೇಕೆಂದು ಆದೇಶಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 2 ಎಸ್ಎಲ್ಸಿ 90, ದಿನಾಂಕ 6-8-90ನ್ನು ಹೊರಡಿಸಲಾಗಿದೆ. ಅರ್ಹತೆ ಹೊಂದಿರುವ ನೌಕರರನ್ನು ಸಕ್ರಮಗೊಳಿಸಲು ಕ್ರಮಕೈಗೊಳ್ಳಲಾಗಿದೆ ಮತ್ತು ಕ್ರಮಕೈಗೊಳ್ಳಲಾಗುತ್ತಿದೆ.

ಇ) ಇಲ್ಲ.

ಈ)''(ಇ)'' ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗ್ಗಡೆ - ವಿಧಾನಸಭಾ ಸದಸ್ಯರು - ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2342ಕ್ಕೆ ಸಂಬಂಧಿಸಿದಂತೆ ವಿವರಣ ಪಟ್ಟಿ.

ಕ್ರಮ ಸಂಖ್ಯೆ	ಇಲಾಖೆ	ದಿನಗೂಲಿ ನೌಕರರ ಸಂಖ್ಯೆ (ಇಲಾಖಾವಾರು)
1.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	51
2.	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	9293
3.	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಇಲಾಖೆ	797
4.	ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯೆಕ ಇಲಾಖೆ	08
5.	ಕೃಷಿ ಮತ್ತು ತೋಟಗಾರಿಕೆ ಇಲಾಖೆ	3789
6.	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ.	185
7.	ಯೋಜನಾ ಇಲಾಖೆ	ಶೂನ್ಯ
8.	ವಿಜ್ಞಾನ, ಯಂತ್ರಕಲಾ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆ	ಶೂನ್ಯ
9.	ಕಂದಾಯ ಇಲಾಖೆ	51
10.	ಆಹಾರ ಮತ್ತು ಸಾರಿಗೆ ಇಲಾಖೆ	06
11.	ಪಶುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆ	9703
12.	ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ	1427
13.	ಸಹಕಾರ ಇಲಾಖೆ	280
14.	ಶಿಕ್ಷಣ ಇಲಾಖೆ	1001
15.	ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ	3457
16.	ಆರ್ಥಿಕ ಇಲಾಖೆ	429
17.	ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ	13
18.	ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ	29, 182
19.	ಒಳಾಡಳಿತ ಇಲಾಖೆ	70
20.	ಇಂಧನ ಇಲಾಖೆ	ಶೂನ್ಯ

21.	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	78
	ಒಟ್ಟು	59,820

ಇಲಾಖೆಗಳ ಮರುಹಂಚಿಕೆ ಮಾಡುವ ಮುನ್ನ.

ವಿಷಯ: ಕಾರಾಗೃಹ ಇಲಾಖೆಯ ನೌಕರರ ವರ್ಗಾವಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1643 (662)

ಶ್ರೀ ಪಾಟೀಳ್ ನಾಗರಾಜ (ವಿಜಯನಗರ): ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಎ) ಕಾರಾಗೃಹ ಇಲಾಖೆಯಲ್ಲಿ ಮೊದಲನೆ ಪಟ್ಟಿಯಲ್ಲಿ ವರ್ಗಾವಣೆ ಮಾಡಲಾದ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು?

(ಬಿ) ಇದುವರೆಗೂ ಮಾರ್ಪಾಡು ವರ್ಗಾವಣೆ ಮಾಡಲಾದ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು? ಎಷ್ಟು ಪಟ್ಟಿಗಳಲ್ಲಿ ಮಾರ್ಪಾಡು ವರ್ಗಾವಣೆಗಳನ್ನು ಮಾಡಲಾಯಿತು? (ದಿನಾಂಕ ಮತ್ತು ವಿವರಗಳನ್ನು ಒದಗಿಸುವುದು)

(ಸಿ) ಪ್ರಸ್ತುತ ವರ್ಷದ ಸರ್ಕಾರದ ವರ್ಗಾವಣೆಯ: ಸಂಖ್ಯೆ:ಸಿ.ಆ.ಸು.ಇ:5, ಸೇನಾವ:95 ದಿನಾಂಕ 28-4-1995ರಂದು ಹೊರಡಿಸಿರುವ ಸುತ್ತೋಲೆಯ ಪ್ರಕಾರ ಮಾರ್ಪಾಡು ವರ್ಗಾವಣೆಗಳನ್ನು ಮಾಡುವಾಗ ಯಾವುದೇ ಪಟ್ಟಿಗೂ ಸಹ ಮುಖ್ಯಮಂತ್ರಿಗಳ ಅನುಮತಿಯನ್ನು ಪಡೆದುಕೊಂಡಿಲ್ಲವಿರುವುದು ನಿಜವಿದ್ದಲ್ಲಿ?

(ಈ) ಹಾಗಿದ್ದಲ್ಲಿ ವರ್ಗಾವಣೆಯ ಮಾರ್ಗ ಸೂಚಿಯ ಪ್ರಕಾರ ಮುಖ್ಯಮಂತ್ರಿಗಳ ಅನುಮೋದನೆ ಪಡೆಯದೇ ಮಾರ್ಪಾಡು ವರ್ಗಾವಣೆಗಳನ್ನು ರದ್ದುಪಡಿಸಲಾಗುವುದೇ?

(ಯು) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಕಾರಾಗೃಹಗಳ ರಾಜ್ಯ ಸಚಿವರು):-

(ಎ) 553

(ಬಿ) 144, ದಿನಾಂಕ 8-6-95, 15-6-95, 20-6-95, 21-6-95 ಮತ್ತು 27-6-95 ರಂದು ಆದೇಶಗಳನ್ನು ಹೊರಡಿಸಲಾಗಿದೆ.

(ಸಿ) ಮಾನ್ಯ ಮುಖ್ಯಮಂತ್ರಿಯವರಿಂದ ಘಟನೋತ್ತರ ಒಪ್ಪಿಗೆ ಪಡೆಯಲಾಗಿದೆ.

(ಈ) ಉದ್ಭವಿಸುವುದಿಲ್ಲ

(ಯು) ಉದ್ಭವಿಸುವುದಿಲ್ಲ

ವಿಷಯ: ಮಂಗಳೂರಿನ ಸಬ್ ಜೈಲಿನ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1645 (2157)

ಶ್ರೀ ಯೋಗೀಶ್ ಭಟ್ (ಮಂಗಳೂರು): ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಎ) ಮಂಗಳೂರಿನ ಸಬ್ ಜೈಲಿನಲ್ಲಿ 150 ಕೈದಿಗಳಿಗೆ ಮಾತ್ರ ವ್ಯವಸ್ಥೆ ಮಾಡಬಹುದಿದ್ದು, ಸರಾಸರಿ